## ಸುವರ್ಣ ಮಂಟಪ

ಇದನ್ನು ಉತ್ತರ ಕನ್ನಡ ಜಿಲ್ಲೆಯ ಕುಮಟದ ಶ್ರೀ.ಶಾಂತೇರಿ ಕಾಮಾಕ್ಷಿ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದನ್ನು ಸುಮಾರು 35 ಕೆ.ಜಿ. ಬಂಗಾರದಿಂದ ಮಾಡಲಾಗಿದ್ದು, ಈ ಮಂಟಪದ ಪೀಠದಲ್ಲಿ ಶ್ರೀ ರಾಮನಾಥ ದೇವರು ಮತ್ತು ನವದುರ್ಗ, ಅಷ್ಟಲಕ್ಷ್ಮೀ ಜೊತೆಗೆ 32 ದೀಪಗಳಿಂದ ಅಲಂಕರಿಸಲಾಗಿದೆ. ಈ ಸುವರ್ಣ ಮಂಟಪದಲ್ಲಿ ವಿಶೇಷ ದಿನಗಳಾದ ನವರಾತ್ರಿ ಉತ್ಸವ, ಅಕ್ಷಯ ತೃತೀಯ ಹಾಗೂ ದೇವಾಲಯದ ಪ್ರಮುಖ ಕಾರ್ಯಕ್ರಮಗಳಲ್ಲಿ ಉತ್ಸವವನ್ನು ನಡೆಸಲಾಗುತ್ತದೆ.

**-ಬಳಕೂರು ವಿ.ಎಸ್.ನಾಯಕ, ಬೆಂಗಳೂರು**





## ಅಕ್ಕಿ ಕಾಳಿನ ಆರತಿ

ಶಿವಮೊಗ್ಗದ ಸಾಗರ ಸಮೀಪದ ತಡಗಳಲೆ ಅನುರಾಧ ರಾವ್ ಅವರು ಮದುವೆ ಮುಂಜಿ ಮುಂತಾದ ಶುಭ ಸಮಾರಂಭಗಳಿಗೆ ವಿಶಿಷ್ಟ ವಿನ್ಯಾಸದ ಅಕ್ಕಿ ಕಾಳುಗಳ ಆರತಿ ತಟ್ಟೆ ತಯಾರಿಸುತ್ತಾರೆ. ಅಕ್ಕಿ ಹಿಟ್ಟಿನ ಉಂಡೆಗಳನ್ನು ತಯಾರಿಸಿ ಅದಕ್ಕೆ ಬಣ್ಣದ ಅಕ್ಕಿ ಕಾಳುಗಳನ್ನು ಚುಚ್ಚಿ ಆರತಿಯನ್ನು ತಯಾರಿಸಿ ಜನರ ಮೆಚ್ಚುಗೆಯನ್ನು ಗಳಿಸಿದ್ದಾರೆ. ಇಂತಹ ಕಲಾಕೃತಿಗಳನ್ನು ಮಾಡುವುದೆಂದರೆ ಅನುರಾಧಾರವರಿಗೆ ಎಲ್ಲಿಲ್ಲದ ಆಸಕ್ತಿ, ಹುಮ್ಮಸ್ಸು.

**-ಸುಭದ್ರ, ನೇಗಿಲೋಣಿ, ಬೆಂಗಳೂರು**

## ಶಿಲ್ಪ ಶಾಸನ

ಶಾಸನಗಳಲ್ಲಿ ಹಲವಾರು ಬಗೆಗಳಿವೆ. ಪ್ರಕೃತಿ ವಿಕೋಪಗಳಿಗೆ ಸುಲಭವಾಗಿ ಜಗ್ಗದ ಶಿಲ್ಪ ಶಾಸನಗಳು ಬಹು ಕಾಲ ಇರುತ್ತವೆ. ಅದರಲ್ಲಿರುವ ಚಿತ್ರಗಳು ವಿವರಿಸುವ ಘಟನೆಗಳನ್ನು ತಿಳಿದುಕೊಳ್ಳಲು ಅಧ್ಯಯನ ಅಗತ್ಯ. ಈ ಚಿತ್ರದಲ್ಲಿರುವ 'ಹರಕೆಯ ಶಾಸನ' ಸಾತೇನಹಳ್ಳಿಯ ಶ್ರೀಶಾಂತೇಶನ ದೇಗುಲದ ಬಾಗಿಲಿನ ಬಳಿ ಇದೆ. ಇದು ದಂಪತಿ ತಲೆಯ ಮೇಲೆ ಕೈ ಜೋಡಿಸಿ ನಿಂತು ಹರಕೆ ತೀರಿಸುತ್ತಿರುವ ಘಟನೆಯನ್ನು ಹೇಳುತ್ತದೆ. ಇಂತಹ ಶಾಸನಗಳು ಸಾಮಾನ್ಯವಾಗಿ ದೇವಾಲಯಗಳ ಮೆಟ್ಟಿಲುಗಳ ಮೇಲೆ ಅಥವಾ ದೇವಾಲಯದ ಒಳ ಬಾಗಿಲಿನ ಬಳಿ ಇರುತ್ತವೆ. ಭಕ್ತರು ಅದನ್ನು ತುಳಿದುಕೊಂಡೇ ಹೋಗಬೇಕೆಂಬುದು ಇದರ ಆಶಯವೆನ್ನುತ್ತಾರೆ ಅರ್ಚಕರು.

**-ಸೀತಾ ಎಸ್.ನಾರಾಯಣ, ಹರಿಹರ**

